# ಈ ಪುಟಾಣಿಯ ವೈದ್ಯಕೀಯ ಚಿಕಿತ್ಸೆಗೆ ನೆರವು ನೀಡುವಿರಾ ಪ್ಲೀಸ್....

ಹೊಸದಿಗಂತ- 26-1-2018

**ಪುತ್ತೂರು:** ಆರ್ಯಾಪು ಗ್ರಾಮದ ಒಳತ್ತಡ್ಕ ನಿವಾಸಿ ರವಿಕುಮಾರ್ ಮತ್ತು ಸುಜಾತ ದಂಪತಿಗೆ ಇಬ್ಬರು ಮಕ್ಕಳಿದ್ದು, ಎರಡನೇ ಮಗು 1 ವರ್ಷ 4 ತಿಂಗಳು ಪ್ರಾಯದ ತ್ರೀಕ್ಷಿತ್ ಹೃದ್ರೋಗ ಸಮಸ್ಯೆಯಿಂದ ಬಳಲುತ್ತಿದೆ. ಹೆಚ್ಚಿನ ಚಿಕಿತ್ಸೆ ಕೊಡಿಸಲು ಕುಟುಂಬ ಆರ್ಥಿಕ ಸಂಕಷ್ಟದಲ್ಲಿದೆ. ಕುಟುಂಬವೀಗ ಸಹೃದಯಿ ದಾನಿಗಳ ನೆರವಿನ ನಿರೀಕ್ಷೆಯಲ್ಲಿದೆ.



ತ್ರೀಕ್ಷಿತ್ ಎರಡೂವರೆ ತಿಂಗಳ ಹಸುಳೆಯಾಗಿದ್ದಾಗಲೇ ಹೃದಯದ ಸಮಸ್ಯೆ ಉಂಟಾಗಿತ್ತು. ಹೃದಯವು ನಿಗದಿತ ಪ್ರಮಾಣಕ್ಕಿಂತ ದೊಡ್ಡದ್ದಾಗಿದ್ದು ಇದರಿಂದ ಮಗುವಿಗೆ ಉಸಿರಾಟದ ತೊಂದರೆಯಾಗುತ್ತಿದೆ.

›p 3

**ನೆರವು ನೀಡಲಿಚ್ಛಿಸುವವರು ಸಿಂಡಿಕೇಟ್ ಬ್ಯಾಂಕ್ ಐಎಫ್‌ಎಸ್‌ಸಿ ಕೋಡ್ ಎಸ್‌ವೈಎನ್‌ಬಿ0000208, ಖಾತೆ ಸಂಖ್ಯೆ. 02082250005599ಗೆ ಜಮಾ ಮಾಡಬಹುದಾಗಿದೆ. ಅಲ್ಲದೆ ಅವರನ್ನು ಸಂಪರ್ಕಿಸಲು ಇಚ್ಛಿಸುವವರು 9535550851ಗೆ ಕರೆ ಮಾಡುವಂತೆ ಕೋರಲಾಗಿದೆ.**

# ನೆರವು ನೀಡಬಲ್ಲಿರಾ?

ರವಿಕುಮಾರ್ ಪುತ್ತೂರಿನ ಜವಳಿ ಮಳಿಗೆಯೊಂದರಲ್ಲಿ ಸೇಲ್ಸ್‌ಮ್ಯಾನ್ ಆಗಿ ಕೆಲಸ ನಿರ್ವಹಿಸುತ್ತಿದ್ದು ಅವರ ಹೆಗಲ ಮೇಲೆಯೇ ಸಂಸಾರದ ಜವಾಬ್ದಾರಿ ಇದೆ. ಸಂಸಾರ ಹಾಗೂ ಮಗುವಿನ ಚಿಕಿತ್ಸೆಗೆ ಹಣ ಸಾಕಾಗುವುದಿಲ್ಲ. ರವಿ ಕುಮಾರ್ ಈಗಾಗಲೇ ರೂ. 3 ಲಕ್ಷಕ್ಕಿಂತಲೂ ಮಿಕ್ಕಿ ಹಣ ವ್ಯಯಿಸಿದ್ದು, ಇದರಿಂದ ಯಾವುದೇ ಪ್ರಯೋಜನವಾಗಿಲ್ಲ. ಮಗುವಿಗೆ ಮಂಗಳೂರಿನ ಎ.ಜೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿತ್ತು. ಆದರೆ ಸ್ವಲ್ಪ ಸಮಯ ಮಗು ಆರೋಗ್ಯವಾಗಿದ್ದರೂ, ಬಳಿಕ ಹೃದಯದ ಸಮಸ್ಯೆ ಉಲ್ಬಣಿಸಿದೆ. ಇದೀಗ ಹೆಚ್ಚಿನ ಚಿಕಿತ್ಸೆಗೆ ಬೆಂಗಳೂರಿಗೆ ಕರೆದೊಯ್ಯಲು ಆಸ್ಪತ್ರೆ ಮಾಹಿತಿ ನೀಡಿದ್ದು, ಚಿಕಿತ್ಸೆಗೆ ಲಕ್ಷಾಂತರ ರೂಗಳ ಹಣದ ಆವಶ್ಯಕತೆ ಇರುವ ಹಿನ್ನೆಲೆಯಲ್ಲಿ, ಕುಟುಂಬ ಸಾಕಷ್ಟು ಸಮಸ್ಯೆ ಎದುರಿಸುವಂತಾಗಿದೆ.

ರೈ ಎಸ್ಟೇಟ್ಸ್ ಎಜ್ಯುಕೇಶನಲ್ ಎಂಡ್ ಚಾರಿಟೇಬಲ್ ಟ್ರಸ್ಟ್ ಜನಸೇವಾ ಕೇಂದ್ರದ ಪ್ರವರ್ತಕ ಕೆ.ಎಸ್. ಅಶೋಕ್ ಕುಮಾರ್ ರೈ ಅವರು ಈಗಾಗಲೇ ಆರ್ಥಿಕ ಸಹಾಯ ನೀಡಿದ್ದು ಚಿಕಿತ್ಸೆಗೆ ಇನ್ನಷ್ಟು ಹಣ ಬೇಕಾಗಿರುವುದರಿಂದ ಸಾರ್ವಜನಿಕರ ನೆರವಿನ ನಿರೀಕ್ಷೆಯನ್ನು ಕುಟುಂಬ ಎದುರು ನೋಡುತ್ತಿದೆ. ಸಹೃದಯಿ ಬಂಧುಗಳು ಈ ಪುಟಾಣಿಯ ಮೌಲ್ಯಯುತ ಜೀವ ಕಾಪಾಡಲು ತಮಗೆ ಇಚ್ಛಿಸಿದಷ್ಟು ಆರ್ಥಿಕ ನೆರವನ್ನು ನೀಡಬಹುದಾಗಿದೆ. ಈ ಮೂಲಕ ಮಾನವೀಯ ಮೌಲ್ಯಕ್ಕೆ ಅರ್ಥ ನೀಡಬೇಕಾಗಿದೆ.